# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ.785/2020

ಪ್ರಮಾಣ ವಚನ ಬೋಧಿಸಲಾಯಿತು

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಮಲ್ಲಿಕಾರ್ಜುನ | ಚಾಸಾ- 1 |
| **ತಂದೆಯ ಹೆಸರು** | ಃ ಶಿವಪ್ಪ | ಪ್ರಾಸಾ- 1 |
| **ವಯಸ್ಸು** | ಃ 55 ವರ್ಷ | |
| **ಉದ್ಯೋಗ** | ಃ ವ್ಯವಸಾಯ | |
| **ವಾಸ** | ಃ ಕುಂದೂರು | ದಿನಾಂಕಃ 18.06.2025 |

## ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ

ದಿಃ **22.06.2020** ರಂದು ಬೆಳಿಗ್ಗೆ **7.30** ರ ಸಮಯದಲ್ಲಿ ನಮ್ಮ ಮನೆ ಮತ್ತು ಜಮೀನು ಇರುವ ಜಾಗದಲ್ಲಿ ನಮ್ಮ ಜಮೀನಿನ ಪಕ್ಕದಲ್ಲಿ ಇರುವ **1** ರಿಂದ **3** ನೇ ಆರೋಪಿತರು ನಮ್ಮ ಜಮೀನನ್ನು ಒತ್ತುವರಿಮಾಡಿಕೊಂಡಿದ್ದೀರಾ ಎಂದು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ಆಗ **1**ನೇ ಆರೋಪಿಯು ತನ್ನ ಮುಷ್ಟಿಯಿಂದ ನನ್ನ ಮೂಗಿನ ಮೇಲೆ ಹೊಡೆದಿರುತ್ತಾನೆ. ನಂತರ ನಾನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿ **2** ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅದೇ ದಿನ ಮಧ್ಯಾಹ್ನ **12.30** ಕ್ಕೆ ಪೋಲಿಸ್ ರವರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದುಕೊಂಡಿದ್ದು, ನಂತರ ನಾಲ್ಕು ದಿನವಾದ ನಂತರ ನನ್ನ ಊರಿಗೆ ಬಂದು ಮರುಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆಗ ಚಾಸಾ-**2** ರಿಂದ **4** ರವರು ಬಂದು ಗಲಾಟೆ ಬಿಡಿಸಿದ್ದು, ಆ ಸಂಬಂಧ ತಮ್ಮ ಹೇಳಿಕೆಯನ್ನು ಪೋಲಿಸ್ ರವರಿಗೆ ಹೇಳಿರುತ್ತಾರೆ.

ಸಾಕ್ಷಿಯು ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**1** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನುರಿತ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.** ದಾಖಲೆಗಳನ್ನು ಪರಿಶೀಲಿಸಿ **ಸಾಕ್ಷಿಯನ್ನು** ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ **ಪಾಟೀ ಸವಾಲು ಮಾಡಲು ಅನುಮತಿ**ಸಲಾಯಿತು)

**ಪಾಟೀ ಸವಾಲು ಃ-** ಶ್ರೀಮತಿ ಎ.ಪಿ.ಪಿ ರವರಿಂದ

ಗಲಾಟೆಯಾದ ದಿನ **2** ಮತ್ತು **3**ನೇ ಆರೋಪಿತರು ನನ್ನನ್ನು ಹಿಡಿದುಕೊಂಡಿದ್ದು **1**ನೇ ಆರೋಪಿತರು ಹೊಡೆದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆಗ ಚಾಸಾ-**3** ರವರು ನನ್ನನ್ನು ಚನ್ನರಾಯಪಟ್ಟಣದ ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ಸರಿ. ನಂತರ ಜಮೀನಿನ ವಿಷಯಕ್ಕೆ ಬಂದರೆ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದರು ಎಂದರೆ ಸರಿ.

ದಿಃ **26.06.2020** ರಂದು ನನ್ನ ಮರುಹೇಳಿಕೆಯಲ್ಲಿ ನನ್ನ ಮಗ ದರ್ಶನ್ ಸ್ಥಳದಲ್ಲಿ ಇರಲಿಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಹಾಗೂ ಚಾಸಾ-**3** ಮತ್ತು **7** ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿ.

ಆರೋಪಿಯ ಪರ ವಕೀಲರು ಸಮಯ ಕೇಳಿದ್ದು ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ 18.06.2025